**All India Radio: Bangalore**
**National Bulletin In Kannada**
**01.03.2026 7.35 am**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**01.03.2026 7.35 am**

**<>><><*><><<>**

ಮುಖ್ಯಾಂಶಗಳು

**೧. ಇಂದು ತಮಿಳುನಾಡು ಮತ್ತು ಪುದುಚೇರಿಯಲ್ಲಿ ೬ ಸಾವಿರದ ೧೦೦ ಕೋಟಿ ರೂಪಾಯಿ ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಚಾಲನೆ**

**೨. ಅಮೆರಿಕ-ಇಸ್ರೇಲ್ ವೈಮಾನಿಕ ದಾಳಿಯಲ್ಲಿ ಇರಾನ್ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ; ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ**

**೩. ಇಸ್ರೇಲ್-ಇರಾನ್ ಉದ್ವಿಗ್ನತೆ; ಕೊಲ್ಲಿ ರಾಷ್ಟ್ರಗಳ ವಿದೇಶಾಂಗ ಸಚಿವರುಗಳೊಂದಿಗೆ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಮಾತುಕತೆ**

**೪. ಐಸಿಸಿ ಟಿ-೨೦ ವಿಶ್ವಕಪ್ ಕ್ರಿಕೆಟ್; ಸೂಪರ್ ೮ರ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ೫ ರನ್‌ಗಳ ಜಯ ಸಾಧಿಸಿದ ಪಾಕಿಸ್ತಾನ; ಆದರೂ ಸೆಮಿಫೈನಲ್‌ಗೆ ಇಲ್ಲ ಅರ್ಹತೆ**

**<>><><*><><<>**

ಪ್ರಧಾನಿ ನರೇಂದ್ರ ಮೋದಿ ಇಂದು ತಮಿಳುನಾಡು ಮತ್ತು ಪುದುಚೇರಿಯಲ್ಲಿ ೬ ಸಾವಿರದ ೧೦೦ ಕೋಟಿ ರೂಪಯಿ ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ರಾಜಸ್ಥಾನ ಮತ್ತು ಗುಜರಾತ್ ಭೇಟಿಯ ನಂತರ ಪ್ರಧಾನಿ ನಿನ್ನೆ ರಾತ್ರಿ ಚನ್ನೈ ತಲುಪಿದರು. ಪುದುಚೇರಿಯಲ್ಲಿ ಪ್ರಧಾನಿ, ಇಂದು ಬೆಳಿಗ್ಗೆ ೨ ಸಾವಿರದ ೬೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ, ಲೋಕಾರ್ಪಣೆಗೊಳಿಸಲಿದ್ದಾರೆ. ಇವುಗಳಲ್ಲಿ ಚೆನ್ನೈ ಬೀಚ್-ಚೆನ್ನೈ ಎಗ್ಮೋರ್ ನಾಲ್ಕನೇ ಮಾರ್ಗದ ಉದ್ಘಾಟನೆಯೂ ಸೇರಿದೆ. ಇದು ಚೆನ್ನೈ ಉಪನಗರ ರೈಲು ಜಾಲದ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸುವ ರೈಲು ಮಾರ್ಗವಾಗಿದೆ. ಈ ವೇಳೆ, ಪ್ರಧಾನಿ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಂತರ, ಪ್ರಧಾನಿಯವರು ಮಧ್ಯಾಹ್ನ ತಮಿಳುನಾಡಿನ ಮಧುರೈಗೆ ಪ್ರಯಾಣಿಸಲಿದ್ದಾರೆ. ಮಧುರೈನಲ್ಲಿ, ಅವರು, ೪ ಸಾವಿರದ

೪೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಮೂಲಸೌಕರ್ಯ ಯೋಜನೆಗಳ ಉದ್ಘಾಟನೆ, ಲೋಕಾರ್ಪಣೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ತಮಿಳುನಾಡಿನಲ್ಲಿ ಪ್ರಸಾರ ಸೇವೆಗಳನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಕುಂಭಕೋಣಂ, ಯೆರ್ಕಾಡ್ ಮತ್ತು ವೆಲ್ಲೂರಿನಲ್ಲಿ ಮೂರು ಹೊಸ ಆಕಾಶವಾಣಿ ಎಫ್‌ಎಂ ರಿಲೇ ಟ್ರಾನ್ಸ್‌ಮಿಟರ್‌ಗಳನ್ನು ಉದ್ಘಾಟಿಸಲಿದ್ದಾರೆ. ಈ ಟ್ರಾನ್ಸ್‌ಮಿಟರ್‌ಗಳು ಪ್ರಾದೇಶಿಕ ವ್ಯಾಪ್ತಿಯನ್ನು ವಿಸ್ತರಿಸಿ ನಿರಂತರ ಎಫ್‌ಎಂ ಪ್ರಸಾರವನ್ನು ಖಚಿತಪಡಿಸುತ್ತವೆ. ರಾಜ್ಯದ ಬಹು ಜಿಲ್ಲೆಗಳಲ್ಲಿ ಸಾರ್ವಜನಿಕ ಪ್ರಸಾರ ಸೇವೆಗಳಿಗೆ ಪ್ರವೇಶವನ್ನು ಹೆಚ್ಚಿಸುತ್ತವೆ. ನಂತರ ಪ್ರಧಾನಿ ಮಧುರೈನಲ್ಲಿ ನಡೆಯಲಿರುವ ಎನ್‌ಡಿಎ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಮಧುರೈನ ತಿರುಪ್ಪರಂಕುಂದ್ರಂನಲ್ಲಿರುವ ಅರುಲ್ಮಿಗು ಸುಬ್ರಮಣ್ಯಸ್ವಾಮಿ ದೇವಾಲಯದಲ್ಲಿ ಪ್ರಧಾನಿ ಪೂಜೆ ಸಲ್ಲಿಸಲಿದ್ದಾರೆ.

**<>><><*><><<>**

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ನಿನ್ನೆ ಕೊಲ್ಲಿ ರಾಷ್ಟ್ರಗಳ ವಿದೇಶಾಂಗ ಸಚಿವರುಗಳೊಂದಿಗೆ ಮಾತುಕತೆ ನಡೆಸಿದರು. ಈ ವೇಳೆ, ರಾಜತಾಂತ್ರಿಕತೆಯ ಮೂಲಕ ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯನ್ನು ಶಮನಗೊಳಿಸುವ ಅಗತ್ಯತೆಯನ್ನು ಎಸ್.ಎಸ್.ಜೈಶಂಕರ್ ಪ್ರತಿಪಾದಿಸಿದ್ದಾರೆ. ಡಾ.ಎಸ್.ಜೈಶಂಕರ್ ಅವರು, ಕೊಲ್ಲಿ ರಾಷ್ಟ್ರದಲ್ಲಿನ ವಿಕಸನಗೊಳ್ಳುತ್ತಿರುವ ಪರಿಸ್ಥಿತಿಯ ಕುರಿತು ಯುಎಇ ವಿದೇಶಾಂಗ ಸಚಿವ ಶೇಖ್ ಅಬ್ದುಲ್ಲಾ ಬಿನ್ ಜಾಯೆದ್ ಅಲ್-ನಹ್ಯಾನ್ ಅವರೊಂದಿಗೆ ಚರ್ಚಿಸಿದರು. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಡಾ.ಎಸ್.ಜೈಶಂಕರ್ ಅವರು, ಉಲ್ಬಣಗೊಳ್ಳುತ್ತಿರುವ ಪರಿಸ್ಥಿತಿಯ ಬಗ್ಗೆ ಭಾರತದ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಭಾರತೀಯ ಸಮುದಾಯದ ಕಲ್ಯಾಣಕ್ಕೆ ತಮ್ಮ ಯುಎಇ ವಿದೇಶಾಂಗ ಸಚಿವರ ಬದ್ಧತೆಯನ್ನು ಅವರು ಶ್ಲಾಘಿಸಿದ್ದಾರೆ. ಸೌದಿ ಅರೇಬಿಯಾದ ವಿದೇಶಾಂಗ ಸಚಿವ ಪ್ರಿನ್ಸ್ ಫೈಸಲ್ ಬಿನ್ ಫರ್ಹಾನ್ ಅವರೊಂದಿಗೆ ಮಾತುಕತೆ ನಡೆಸಲಾಗಿದ್ದು ಕೊಲ್ಲಿಯಲ್ಲಿ ನಡೆಯುತ್ತಿರುವ ಪರಿಸ್ಥಿತಿಯ ಕುರಿತು ಚರ್ಚಿಸಿರುವುದಾಗಿ ಎಂದು ಡಾ.ಜೈಶಂಕರ್ ತಿಳಿಸಿದ್ದಾರೆ. ನಿನ್ನೆ ಸಂಜೆ ಜೈಶಂಕರ್ ಅವರು, ಕತಾರ್ ಪ್ರಧಾನಿ ಮತ್ತು ವಿದೇಶಾಂಗ ಸಚಿವ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್ರಹಮಾನ್ ಬಿನ್ ಜಾಸಿಮ್ ಅಲ್ ಥಾನಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದಾರೆ. ಭಾರತೀಯ ಸಮುದಾಯದ ಯೋಗಕ್ಷೇಮದ ಕುರಿತು ಕತಾರ್ ಪ್ರಧಾನಿ ನೀಡಿರುವ ಭರವಸೆಯನ್ನು ಗೌರವಿಸುವುದಾಗಿ ತಿಳಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿನ ಉದ್ವಿಗ್ನತೆ ಕುರಿತು ಡಾ.ಜೈಶಂಕರ್ ಅವರು, ಬಹ್ರೇನ್ ವಿದೇಶಾಂಗ ಸಚಿವ

ಡಾ.ಅಬ್ದುಲ್ಲತೀಫ್ ಬಿನ್ ರಶೀದ್ ಅಲ್ ಜಯಾನಿ ಅವರೊಂದಿಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಭಾರತೀಯ ಸಮುದಾಯವನ್ನು ಸುರಕ್ಷಿತವಾಗಿಡಲು ಬಹ್ರೇನ್ ಸರ್ಕಾರವು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಈ ಸಂದರ್ಭದಲ್ಲಿ ಬಹ್ರೇನ್ ವಿದೇಶಾಂಗ ಸಚಿವರು ಭರವಸೆ ನೀಡಿರುವುದಾಗಿ ತಿಳಿಸಿದ್ದಾರೆ. ವಿದೇಶಾಂಗ ಸಚಿವರು ಕುವೈತ್‌ನ ತಮ್ಮ ಸಹವರ್ತಿ ಶೇಖ್ ಜರಾಹ್ ಜಾಬರ್ ಅಲ್-ಅಹ್ಮದ್ ಅಲ್-ಸಬಾ ಅವರೊಂದಿಗೆ ಸಹ ಮಾತುಕತೆ ನಡೆಸಿದ್ದಾರೆ. ಭಾರತೀಯ ಸಮುದಾಯದ ಸುರಕ್ಷತೆಗಾಗಿ ಕುವೈತ್ ವಿದೇಶಾಂಗ ಸಚಿವರು ಭರವಸೆ ನೀಡಿರುವುದಾಗಿ ಸಚಿವ ಎಸ್.ಜೈಶಂಕರ್ ತಿಳಿಸಿದ್ದಾರೆ.

<>><><*><><<>

ಆಕಾಶವಾಣಿ ಸುದ್ದಿ ವಿಭಾಗ ಪೀಪಲ್ಸ್ ಪದ್ಮ ಎಂಬ ವಿನೂತನ ಸರಣಿ ಕಾರ್ಯಕ್ರಮವನ್ನು ಆರಂಭಿಸುತ್ತಿದೆ. ಈ ಕಾರ್ಯಕ್ರಮದಲ್ಲಿ ೨೦೨೪ ರ ಸಾಲಿನ ಪದ್ಮ ಪ್ರಶಸ್ತಿ ವಿಜೇತರೊಂದಿಗೆ ಸಂವಾದ ನಡೆಸಲಾಗುವುದು. ಸರಣಿಯ ಮೊದಲ ಭಾಗದಲ್ಲಿ ಐಐಟಿ ಮದ್ರಾಸ್ ನಿರ್ದೇಶಕರಾದ ಪ್ರೊಫೆಸರ್ ವಿ ಕಾಮಕೋಟಿ ಅವರೊಂದಿಗೆ ಮಾತುಕತೆ ಆಡಲಿದ್ದೇವೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ನೀಡಿದ ಅಪಾರ ಕೊಡುಗೆಗಾಗಿ  ಪ್ರೊಫೆಸರ್ ವಿ ಕಾಮಕೋಟಿ ಅವರಿಗೆ ೨೦೨೪ ನೇ ಸಾಲಿನ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಈ ಸರಣಿಯನ್ನು ಆಳಿಸಲು ಇಂದು ಸಂಜೆ ೫:೧೦ ಕ್ಕೆ ತರಾಂಗಂತರ ೧೦೦.೧ ಆಕಾಶವಾಣಿ ಗೋಲ್ಡ್ ಗೆ ಟ್ಯೂನ್ ಮಾಡಿ. ನ್ಯೂಸ್ ಆನ್ ಏರ್ ಆಪ್ ನಲ್ಲಿ ಮತ್ತು ನ್ಯೂಸ್ ಆನ್ ಏರ್ ಅಧಿಕೃತ ಯು ಟ್ಯೂಬ್ ಚಾನೆಲ್ ನಲ್ಲಿ ಕೂಡಾ ಈ ಕಾರ್ಯಕ್ರಮ ಕೇಳಬಹುದಾಗಿದೆ.  ಇದೇ ರೀತಿ ಆಕಾಶವಾಣಿ ಸುದ್ದಿ ವಿಭಾಗ ಆರಂಭಿಸಿರುವ ಪ್ರಕೃತಿ ಕಿ ಬಾತ್ ಆಕಾಶವಾಣಿಕೆ ಸಾತ್ ಸರಣಿ ಕಾರ್ಯಕ್ರಮದ  ೨ನೇ ಕಂತನ್ನು ಬೆಳಗ್ಗೆ ೧೦.೩೦ ಕ್ಕೆ ಆಲಿಸಬಹುದಾಗಿದೆ.  ಈ ಕಾರ್ಯಕ್ರಮದಲ್ಲಿ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಅನಿಲ್ ಪ್ರಕಾಶ್ ಜೋಶಿ ಅವರೊಂದಿಗೆ ಸಂವಾದ ನಡೆಸಲಾಗುವುದು.

<>><><*><><<>

ಮುಂಬರುತ್ತಿರುವ ಹೋಳಿ ಹಬ್ಬದ ಪ್ರಯುಕ್ತ ಪ್ರಯಾಣಿಕರ ಸೌಕರ್ಯದ ದೃಷ್ಟಿಯಿಂದ ಉತ್ತರ ರೈಲ್ವೇ ವಲಯದ ಪ್ರಧಾನ ವ್ಯವಸ್ಥಾಪಕರಾದ ರಾಜೇಶ್ ಕುಮಾರ್ ಪಾಂಡೆ ನಿನ್ನೆ ನವದೆಹಲಿ ಮತ್ತು ಆನಂದ್ ವಿಹಾರ ಟರ್ಮಿನಲ್ ರೈಲು ನಿಲ್ದಾಣಗಳ ಪರಿವೀಕ್ಷಣೆ ನಡೆಸಿದರು. ಹಬ್ಬದ ಸಂದರ್ಭದಲ್ಲಿ ರೈಲುಗಳಲ್ಲಿ ಪ್ರಯಾಣಿಕರ ಸುರಕ್ಷತೆ, ಜನಪ್ರವಾಹ ನಿರ್ವಹಣೆ ಮತ್ತು ಸ್ವಚ್ಛತೆಯನ್ನು ಖಚಿತಪಡಿಸುವುದು ಈ ವೀಕ್ಷಣೆಯ ಉದ್ದೇಶವಾಗಿತ್ತು. ಈ ಸಂದರ್ಭದಲ್ಲಿ ಪ್ರಯಾಣಿಯಕರೊಂದಿಗೆ

ರಾಜೇಶ್ ಸ್ವತಃ ಸಂವಾದ ನಡೆಸಿದರು. ಸ್ವಚ್ಛತೆ ಮತ್ತು ಸುವ್ಯವಸ್ಥೆ ಬಗ್ಗೆ ಜನರು ಮೆಚ್ಚುಗೆ ವ್ಯಕ್ತಪಡಿಸಿರುವುದಾಗಿ ಉತ್ತರ ರೈಲ್ವೇ ವಿಭಾಗ ಖಚಿತಪಡಿಸಿದೆ. ಇದೆ ವೇಳೆ ಪ್ರಧಾನ ವ್ಯವಸ್ಥಾಪಕರು ಕಾಲ್ನಡಿಗೆ ಸೇತುವೇ, ಎಸ್ಕಲೇಟರ್, ಪ್ಲಾಟ್ ಫಾರಂ ಪ್ರವೇಶದ್ವಾರಗಳು ಮುಂತಾದವುಗಳ ಪರಿಶೀಲನೆ ನಡೆಸಿದರು.

**<>><><*><><<>**

ಇರಾನ್‌ನ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅಮೆರಿಕ-ಇಸ್ರೇಲ್ ವೈಮಾನಿಕ ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್ ಮಾಡಿರುವ ಅವರು, ಖಮೇನಿ ಅವರ ಸಾವು ಇರಾನಿನ ಜನರು ತಮ್ಮ ದೇಶವನ್ನು ಮರಳಿ ಪಡೆಯಲು ಇರುವ ಏಕೈಕ ದೊಡ್ಡ ಅವಕಾಶ ಎಂದು ಟ್ರಂಪ್ ತಿಳಿಸಿದ್ದಾರೆ. ಇರಾನಿನ ಮಿಲಿಟರಿ ಮತ್ತು ಸರ್ಕಾರಿ ತಾಣಗಳನ್ನು ಗುರಿಯಾಗಿಸಿಕೊಂಡು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿದ ವೈಮಾನಿಕ ಬಾಂಬ್ ದಾಳಿಯ ನಂತರ ಇರಾನ್‌ನ ಪರಮೋಚ್ಚ ನಾಯಕನ ಸಾವು ಸಂಭವಿಸಿದೆ ಎಂದು ವರದಿಯಾಗಿದೆ. ಹಿರಿಯ ಇಸ್ರೇಲಿ ಅಧಿಕಾರಿಯ ಪ್ರಕಾರ, ಖಮೇನಿ ಅವರ ಮೃತದೇಹ ಪತ್ತೆಯಾಗಿದೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ನಿನ್ನೆ ಮುಂಜಾನೆ ಇಸ್ರೇಲ್ ತನ್ನ ಆವರಣದ ಮೇಲೆ ದಾಳಿ ಮಾಡಿದಾಗ ೮೬ ವರ್ಷದ ಖಮೇನಿ ಹತ್ಯೆಗೀಡಾಗಿದ್ದಾರೆ ಹೇಳಿದ್ದಾರೆ. ಖಮೇನಿ ಅವರ ಸಾವಿನ ಬಗ್ಗೆ ಇರಾನ್‌ನಿಂದ ತಕ್ಷಣದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

**<>><><*><><<>**

ಇಸ್ರೇಲ್‌ನಲ್ಲಿ ಹದಗೆಡುತ್ತಿರುವ ಭದ್ರತಾ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅಲ್ಲಿ ನೆಲೆಸಿರುವ ಭಾರತೀಯ ನಾಗರಿಕರಿಗೆ ಭಾರತ ಸರ್ಕಾರ ಅತ್ಯಂತ ತುರ್ತು ಸುರಕ್ಷತಾ ಸಲಹೆಯನ್ನು ನೀಡಿದೆ. ಈ ಪ್ರದೇಶದಲ್ಲಿನ ಉದ್ವಿಗ್ನತೆಯ ಕಾರಣದಿಂದಾಗಿ ಪ್ರತಿಯೊಬ್ಬ ಭಾರತೀಯರು ಸದಾ ಜಾಗರೂಕರಾಗಿರಬೇಕು ಮತ್ತು ಹೆಚ್ಚಿನ ಎಚ್ಚರಿಕೆ ವಹಿಸಬೇಕು ಎಂದು ಸೂಚಿಸಲಾಗಿದೆ. ಇಸ್ರೇಲ್‌ನ ಅಧಿಕಾರಿಗಳು ಹಾಗೂ 'ಹೋಮ್ ಫ್ರಂಟ್ ಕಮಾಂಡ್' ನೀಡಿರುವ ಸುರಕ್ಷತಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಟೆಲ್ ಅವೀವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಕೋರಿದೆ. ಭಾರತೀಯ ನಾಗರಿಕರು ತಮ್ಮ ವಾಸಸ್ಥಳ ಅಥವಾ ಕೆಲಸದ ಸ್ಥಳದ ಸಮೀಪವಿರುವ ಅಧಿಕೃತ ಆಶ್ರಯ ತಾಣಗಳ ಬಗ್ಗೆ ಮಾಹಿತಿ ಹೊಂದಿರಬೇಕು ಮತ್ತು ತುರ್ತು ಸಂದರ್ಭದಲ್ಲಿ ಅವುಗಳಿಗೆ ತಲುಪುವಷ್ಟು ಹತ್ತಿರದಲ್ಲಿರಬೇಕು ಎಂದು ಸಲಹೆ ನೀಡಲಾಗಿದೆ.

ಯಾವುದೇ ತುರ್ತು ಪರಿಸ್ಥಿತಿಯಲ್ಲಿ ನೆರವಿಗಾಗಿ ಭಾರತೀಯ ರಾಯಭಾರ ಕಚೇರಿಯ ಸಹಾಯವಾಣಿ ಸಂಖ್ಯೆ +೯೭೨-೫೪-೭೫೨೦೭೧೧ ಅಥವಾ ಇಮೇಲ್ cons1.telaviv@mea.gov.in ಮೂಲಕ ಸಂಪರ್ಕಿಸಬಹುದು ಎಂದು ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

**<><><*><><<>**

ಐಸಿಸಿ ಪುರುಷರ ಟಿ-೨೦ ಕ್ರಿಕೆಟ್ ವಿಶ್ವಕಪ್‌ನಲ್ಲಿ, ಶ್ರೀಲಂಕಾದ ಪಲ್ಲೆಕೆಲೆಯಲ್ಲಿ ನಿನ್ನೆ ರಾತ್ರಿ ನಡೆದ ಸೂಪರ್ ೮ರ ಹಂತದ ಗುಂಪು -೨ರ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಐದು ರನ್‌ಗಳ ಜಯ ಸಾಧಿಸಿದೆ. ಆದರೂ ಪಾಕಿಸ್ತಾನ ಸೆಮಿಫೈನಲ್ ತಲುಪುವ ಅರ್ಹತೆಯಿಂದ ವಂಚಿತವಾಗಿದೆ. ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ, ಸಾಹಿಬ್‌ಜಾದಾ ಫರ್ಹಾನ್ ಅವರ ೧೦೦ ಮತ್ತು ಆರಂಭಿಕ ಆಟಗಾರ ಫಖರ್ ಜಮಾನ್ ಅವರ ೮೪ ರನ್‌ಗಳ ನೆರವಿನಿಂದ ನಿಗದಿತ ೨೦ ಓವರ್‌ಗಳಲ್ಲಿ ೮ ವಿಕೆಟ್‌ಗಳಿಗೆ ೨೧೨ ರನ್ ಗಳಿಸಿತು. ಇದಕ್ಕೆ ಉತ್ತರವಾಗಿ, ಶ್ರೀಲಂಕಾ ಕಠಿಣ ಹೋರಾಟ ನಡೆಸಿದರೂ ೨೦ ಓವರ್‌ಗಳಲ್ಲಿ ಆರು ವಿಕೆಟ್‌ಗಳಿಗೆ ೨೦೭ ರನ್ ಗಳಿಸಿತು, ನಾಯಕ ದಾಸುನ್ ಶನಕ ೭೬ ರನ್‌ಗಳೊಂದಿಗೆ ಅಜೇಯರಾಗಿ ಉಳಿದರು.

**<><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<><>< ನಮ್ಮ ಮುಂದಿನ ವಾರ್ತಾ ಮಧ್ಯಾಹ್ನ ೧೨ ಕ್ಕೆ ><><<>**